For more job news visit : www.kpscvaani.com

ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

ಹಾಸನ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಜಿಲ್ಲೆಯ 8 ತಾಲ್ಲೂಕುಗಳ ಸಮಗ್ರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿಯಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಹುದ್ದೆಗಳನ್ನು ಗೌರವ ಸೇವೆಯ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಮಹಿಳಾ ಮತ್ತು ಲಿಂಗತ್ವ ಅಲ್ಪಸಂಖ್ಯಾತರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಹಾಸನ ತಾಲೂಕು ಕಾರ್ಯಕರ್ತೆಯರು-17, ಸಹಾಯಕಿಯರು-74, ಚನ್ನರಾಯಪಟ್ಟಣ ಕಾರ್ಯಕರ್ತೆಯರು-39, ಸಹಾಯಕಿಯರು-103, ಹೊಳೆನರಸೀಪುರ ಕಾರ್ಯಕರ್ತೆಯರು-27 ಸಹಾಯಕಿಯರು-61, ಬೇಲೂರು ಕಾರ್ಯಕರ್ತೆಯರು-7 ಸಹಾಯಕಿಯರು-82, ಸಕಲೇಶಪುರ ಕಾರ್ಯಕರ್ತೆಯರು-15, ಸಹಾಯಕಿಯರು-46, ಆಲೂರು ಕಾರ್ಯಕರ್ತೆಯರು-1 ಸಹಾಯಕಿಯರು-24, ಅರಸೀಕೆರೆ ಕಾರ್ಯಕರ್ತೆಯರು-45, ಸಹಾಯಕಿಯರು-126, ಅರಕಲಗೂಡು ಕಾರ್ಯಕರ್ತೆಯರು-17, ಸಹಾಯಕಿಯರು-50 ಮಂದಿ ನೇಮಕ ಆಗಲಿದೆ.

ಆಸಕ್ತ ಸ್ಥಳೀಯರು ಇಲಾಖೆಯ ವೆಬ್‌ಸೈಟ್ ವಿಳಾಸ: https://karnemakaone.kar.nic.in/abcd/ ಮೂಲಕ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಲು ಸೆ.4 ಕೊನೆಯ ದಿನಾಂಕವಾಗಿದ್ದು, ಅಂದು ಸಂಜೆ 5.30 ರೊಳಗೆ ನಿಗದಿಪಡಿಸಿರುವುದಾಗಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ಹಾಗೂ ಸಂಬಂಧಿಸಿದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು ಸಂಪರ್ಕಿಸಬಹುದು.